ಮೂರ್ತೆದಾರರ ನಿರುದ್ಯೋಗದ ಬಗ್ಗೆ

1765. ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶೇಂದಿ ಮಾರಾಟ ರದ್ದತಿಯಿಂದ ರಾಜ್ಯದಲ್ಲಿ ಎಷ್ಟು ಜನ ಮೂರ್ತೆದಾರರು ಉದ್ಯೋಗ ಕಳೆದುಕೊಂಡಿರುವರು?

ಆ) ಮೂರ್ತೆ ಕಳೆದುಕೊಂಡ ಈ ಮೂರ್ತೆದಾರರಿಗೆ ಯಾವ ಬದಲಿ ಉದ್ಯೋಗ ಒದಗಿಸಲಾಗಿದೆ?

ಇ) ಈ ಉದ್ಯೋಗ ಹೀನ ಮೂರ್ತಿದಾರರು ಯಾವ ಕೇಳಿಕೆಯನ್ನು ಸರ್ಕಾರಕ್ಕೆ ಒಪ್ಪಿಸಿರುವರು?

ಈ) ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮೂರ್ತೆದಾರರಿಗೆ ಬದಲಿ ಉದ್ಯೋಗ ಒದಗಿಸುವ ಸಮಿತಿ ನೇಮಿಸಿರುವುದು ಎಷ್ಟರತನಕ ಫಲಕಾರಿಯಾಗಿದೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಸುಮಾರು 10.468.

ಆ) ಉದ್ಯೋಗ ಕಳೆದುಕೊಂಡ ಮೂರ್ತೆದಾರರಿಗೆ ಪುನರ್ವಸತಿ ವ್ಯವಸ್ಥೆ ಮಾಡಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ಸಮಾಲೋಚನೆಯೊಂದಿಗೆ ಬದಲಿ ಉದ್ಯೋಗ ಕಲ್ಪಿಸಲು ಮತ್ತು ಐಆರ್‌ಡಿಪಿಯಡಿಯಲ್ಲಿ ಇತರೆ ಸುಧಾರಣ ಯೋಜನೆಯಲ್ಲಿರುವ ಉಪಯೋಗವನ್ನು ಕಲ್ಪಿಸಲು ಜಿಲ್ಲಾ ಡೆಪ್ಯುಟಿ ಕಮಿಷನರುಗಳ ನಿರ್ದೇಶಿಸಲಾಗಿದೆ.

ಇ) ಪರಿಹಾರ ಕೇಳಿದ್ದಾರೆ.

ಈ) ದ.ಕ. ಜಿಲ್ಲೆಯಲ್ಲಿ ಶೇಂದಿ ಮಾರಾಟಕ್ಕಾಗಿ ಮೂರ್ತೆದಾರರ ಸಹಕಾರ ಸಂಘಗಳನ್ನು ನೋಂದಾಯಿಸಲು ಸರ್ಕಾರ ಅನುಮತಿ ನೀಡಿದೆ. ಈವರೆವಿಗೆ 32 ಸಂಘಗಳ ನೋಂದಣಿ ಆಗಿದ್ದು ಅದರಲ್ಲಿ 16 ಸಂಘಗಳಿಗೆ ಅಬಕಾರಿ ಇಲಾಖೆಯಿಂದ ಶೇಂದಿ ಇಳಿಸಲು ಹಾಗೂ ಮಾರಾಟ ಮಾಡಲು ಪರವಾನಗಿ ನೀಡಲಾಗಿದೆ. ಈ ಸಂಘಗಳು ಗಳಿಸುವ ಲಾಭವು ಸಂಘದ ಸದಸ್ಯರಾದ ಮೂರ್ತೆದಾರರಿಗೆ ಸಲ್ಲುವುದು. ಇನ್ನೂ ಉಳಿದ ಭಾಗಗಳಲ್ಲಿ ಸಂಘಗಳನ್ನು ನೋಂದಾಯಿಸುವ ಕಾರ್ಯ ರಾಜ್ಯ ಹೈಕೋರ್ಟಿನ ತಡೆಯಾಜ್ಞೆ ಇರುವುದರಿಂದ ಸ್ಥಗಿತವಾಗಿದೆ.

ಗೌರಿಬಿದನೂರ್ ತಾಲ್ಲೂಕಿನಲ್ಲಿ ಹೆಂಡದ ಮಾರಾಟ

1329. ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಾದ್ಯಂತ ಹೆಂಡ ಮಾರಾಟ ನಿಷೇಧವಿದ್ದು ಪಾವಗಡ ಮತ್ತು ಗೌರಿಬಿದನೂರು ತಾಲ್ಲೂಕಿನಲ್ಲಿ ಬಹಿರಂಗವಾಗಿ ಹೆಂಡ ಮಾರಾಟ ಮಾಡುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?

2) ಹೀಗೆ ಬಹಿರಂಗವಾಗಿ ಹೊಡ ಮಾರಾಟಕ್ಕೆ ಪರೋಕ್ಷ ಅನುಮತಿ ಕೊಟ್ಟಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವುದಿಲ್ಲವೇ?

3) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮ ಸಿಂಗ್ (ಗೃಹ ಮತ್ತು ಆಬಕಾರಿ ಸಚಿವರು) :

ಅ) ಕೆಲವು ದೂರುಗಳು ಬಂದಿವೆ.

ಆ) ಕಾನೂನಿನ ಪ್ರಕಾರ ಅಂತಹ ಪ್ರಕರಣಗಳಲ್ಲಿ ಕ್ರಮ ತೆಗೆದುಕೊಂಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲಾಖೆಯ ಅಧಿಕಾರಿಗಳು ಇಂತಹ ಪ್ರಕರಣಗಳಲ್ಲಿ ಐದು ಮೊಕದ್ದಮೆಗಳನ್ನು ಹೂಡಿದ್ದು, 225 ಲೀಟರ್ ಶೇಂದಿಯನ್ನು ಇಲಾಖೆಗೆ ವಶಪಡಿಸಿಕೊಂಡಿದ್ದಾರೆ. ಅಂತಹ ಸ್ಥಳದಲ್ಲಿರುವ ಸಿಬ್ಬಂದಿಗೆ ಹೆಚ್ಚು ಜಾಗರೂಕರಾಗಿರಲು ಸೂಚನೆಗಳನ್ನು ನೀಡಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರರ ಗೌರವ ಧನಕ್ಕಾಗಿ ಬಂದ ಅರ್ಜಿಗಳ ಸಂಖ್ಯೆ.

1840. ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಗೌರವಧನ ಕೋರಿಕೆಯ ಬಗ್ಗೆ ಬಂದಿರುವ ಅರ್ಜಿಗಳಲ್ಲಿ ವಿಲೇವಾರಿಯಾಗದೆ ಉಳಿದಿರುವ ಅರ್ಜಿಗಳೆಷ್ಟು:

ಆ) ಎಷ್ಟು ದಿವಸಗಳಿಂದ ವಿಲೇವಾರಿಯಾಗದೆ ಉಳಿದಿವೆ:

ಇ) ವಿಲೇವಾರಿಯಾಗದೇ ಉಳಿದಿರುವುದಕ್ಕೆ ಕಾರಣಗಳೇನು:

ಈ) ಈ ಅರ್ಜಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಎಷ್ಟು ಕಾಲ ಬೇಕಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1800 ಅರ್ಜಿಗಳು ಬಾಕಿ ಇವೆ.

ಆ) ದಿನಾಂಕ 31-12-1982 ರಂದು ಸರ್ಕಾರವು ರಾಜ್ಯ ಗೌರವಧನ ಮಂಜೂರಾತಿಗೆ ಕಡೆಯ ದಿನಾಂಕವೆಂದು ನಿಗದಿಪಡಿಸಿತ್ತು. ಬಾಕಿ ಇರುವ ಈ ಅರ್ಜಿಗಳೆಲ್ಲ 1983 ರಿಂದೀಚೆಗೆ ಇಲ್ಲಿಯತನಕ ಬಂದಿರುವ ಅರ್ಜಿಗಳು.

ಇ) ಅರ್ಜಿದಾರರು ಪೂರ್ಣ ಮಾಹಿತಿಗಳನ್ನು ಒದಗಿಸಿರುವುದಿಲ್ಲವಾದುದರಿಂದ ಈ ಅರ್ಜಿಗಳು ವಿಲೇವಾರಿಯಾಗದೆ ಉಳಿದಿವೆ.

ಈ) ಅರ್ಜಿದಾರರು ಮಾಹಿತಿ ಒದಗಿಸಿದ ಕೂಡಲೇ ಉಪ ಸಮಿತಿಯ ಸಲಹೆ ಪಡೆದು ಈ ಅರ್ಜಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು.